# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ : 820**

**ಸದಸ್ಯರ ಹೆಸರು : ಶ್ರೀ ಎಸ್.ಎಲ್ ಭೋಜೇಗೌಡ (ಶಿಕ್ಷಕರ ಕ್ಷೇತ್ರ)**

**ಉತ್ತರಿಸಬೇಕಾದ ದಿನಾಂಕ : 16.12.2024**

**ಉತ್ತರಿಸುವ ಸಚಿವರು : ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ರಾಜ್ಯದ ಶಾಲಾ ಕಾಲೇಜುಗಳಿಗೆ ಹಲವಾರು ಯೋಜನೆಗಳ ಮೂಲಕ ಯಂತ್ರೋಪಕರಣಗಳು ಹಾಗೂ ಇತರೆ ಸಾಮಾಗ್ರಿಗಳನ್ನು ನೀಡಲು ಸರ್ಕಾರ ಕಿಯೋನಿಕ್ಸ್ ಸಂಸ್ಥೆಗೆ 2005 ರಿಂದ 2024 ರವರೆಗೆ ನೀಡಿರುವ ವಿವಿಧ ಯೋಜನೆಗಳು ಯಾವುವು; (ಸಂಪೂರ್ಣ ವಿವರವಾದ ಮಾಹಿತಿಯನ್ನು ನೀಡುವುದು) | ಸರ್ಕಾರದ ಆದೇಶ ದಿನಾಂಕ 20.01.2007 ರನ್ವಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ರಾಜ್ಯದ ಶಾಲಾ ಕಾಲೇಜುಗಳಿಗೆ ಮುಂದುವರೆದ ಮಾಹಿತಿ ಸಿಂಧು ಯೋಜನೆಯಲ್ಲಿ ಯಾವುದೇ ಉಪಕರಣ/ಸಾಮಗ್ರಿ ಸರಬರಾಜು ಮಾಡುವ ಜವಾಬ್ದಾರಿಯನ್ನು ಕಿಯೋನಿಕ್ಸ್ ಸಂಸ್ಥೆಗೆ ವಹಿಸಿರಲಿಲ್ಲ. ಆದರೆ ಗಣಕಯಂತ್ರ ಹಾಗೂ ಇತರೆ ಉಪಕರಣಗಳ ನಿರ್ವಹಣೆಯ ಜವಾಬ್ದಾರಿಯನ್ನು ಮಾತ್ರ ವಹಿಸಲಾಗಿತ್ತು.<br><br>ದಿನಾಂಕ 22.07.2011 ರಂದು ಇಲಾಖೆಯು ಕಿಯೋನಿಕ್ಸ್ ಸಂಸ್ಥೆಯೊಂದಿಗೆ ಐ.ಸಿ.ಟಿ ಫೇಸ್-3 ಯೋಜನೆಯ ಅನುಷ್ಠಾನದ ಒಪ್ಪಂದ ಮಾಡಿಕೊಂಡಿತು. ಇದರ ಒಟ್ಟು ಮೊತ್ತ ರೂ. 412.04 ಕೋಟಿಗಳು. ಇದರನ್ವಯ ಸದರಿ ಸಂಸ್ಥೆಗೆ 1763 ಸರ್ಕಾರಿ ಹಾಗೂ 2633 ಅನುದಾನಿತ ಪ್ರೌಢ ಶಾಲೆ ಸೇರಿದಂತೆ ಒಟ್ಟು 4396 ಪ್ರೌಢ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ ಅನುಷ್ಠಾನ ಮಾಡುವುದು, ಕೊಠಡಿ ಪೂರ್ವ ಸಿದ್ಧತೆ, ಯಂತ್ರೋಪಕರಣಗಳ (ಕಂಪ್ಯೂಟರ್ ಪರಿಕರಗಳ) ಸರಬರಾಜು ಮತ್ತು ಅಳವಡಿಕೆ, ಸಾಫ್ಟ್‌ವೇರ್ ಒದಗಿಸುವುದು ಹಾಗೂ ಯೋಜನೆಯ ಅನುಷ್ಠಾನ ಮಾಡುವುದು ಸೇರಿದಂತೆ ಸಂಪೂರ್ಣ ಜವಾಬ್ದಾರಿ ವಹಿಸಲಾಗಿರುತ್ತದೆ.<br><br>ಕಿಯೋನಿಕ್ಸ್ ಸಂಸ್ಥೆಗೆ ದಿನಾಂಕ 22.07.2011 ರಿಂದ 05.07.2016 ರವರೆಗೆ ಸದರಿ ಯೋಜನೆಯ ಅನುಷ್ಠಾನಕ್ಕಾಗಿ ರೂ.39,20,61,785/-ಗಳ ಮೊತ್ತವನ್ನು ಬಿಡುಗಡೆಗೊಳಿಸಲಾಗಿರುತ್ತದೆ.<br><br>ಸದರಿ ಯೋಜನೆಯ ಅಸಮರ್ಪಕ ನಿರ್ವಹಣೆ ಕಾರಣದಿಂದ ಯೋಜನೆ ವಿಫಲಗೊಂಡಿದೆ. ಕಿಯೋಕ್ಸ್‌ನೊಂದಿಗೆ ಮಾಡಿಕೊಳ್ಳಲಾಗಿದ್ದ ಕರಾರನ್ನು ದಿನಾಂಕ 05.07.2016 ರಂದು ರದ್ದುಗೊಳಿಸಲಾಗಿದೆ. ನಂತರ ಈವರೆಗೆ ಕಿಯೋನಿಕ್ಸ್ ಸಂಸ್ಥೆಗೆ ಯಾವುದೇ ಯೋಜನೆಯ ಜವಾಬ್ದಾರಿ ವಹಿಸಿರುವುದಿಲ್ಲ. |
| ಆ | ಈ ಕಿಯೋನಿಕ್ಸ್ ಸಂಸ್ಥೆಯು ಶಿಕ್ಷಣ ಇಲಾಖೆಗೆ ಪೂರ್ಣ ಪ್ರಮಾಣದಲ್ಲಿ ಸಾಮಗ್ರಿಗಳನ್ನು | ಕಿಯೋನಿಕ್ಸ್ ಸಂಸ್ಥೆಯು ಐ.ಸಿ.ಟಿ ಫೇಸ್-3 ಯೋಜನೆಯ ಕರಾರಿನಂತೆ ಪೀಠೋಪಕರಣದ |

| | | |
|---|---|---|
| | ಸರಬರಾಜು ಮಾಡಿದೆಯೇ; | ಸರಬರಾಜನ್ನು ಅಪೂರ್ಣಗೊಳಿಸಿರುತ್ತಾರೆ ಹಾಗೂ ಗಣಕ ಯಂತ್ರಗಳನ್ನು ನಿಗದಿತ ಶಾಲೆಗಳಿಗೆ ಸರಬರಾಜು ಮಾಡಿರುವುದಿಲ್ಲ. |
| ಇ | ಸರ್ಕಾರಕ್ಕೆ ಕಿಯೋನಿಕ್ಸ್ ಸಂಸ್ಥೆಯಿಂದ ನೀಡಿರುವ ಹಲವಾರು ಉಪಕರಣಗಳು ಕಳಪೆ ಮಟ್ಟದಿಂದ ಕೂಡಿದ್ದು, ಸರ್ಕಾರಕ್ಕೆ ಇದರಿಂದ ಆಗಿರುವ ನಷ್ಟವನ್ನು ಬರಿಸಲು ಈ ಸಂಸ್ಥೆಯ ವಿರುದ್ಧ ಕೈಗೊಂಡಿರುವ ಕ್ರಮಗಳೇನು? | ಕಿಯೋನಿಕ್ಸ್ ಸಂಸ್ಥೆಯು ಐ.ಸಿ.ಟಿ ಫೇಸ್-3 ಯೋಜನೆಯ ಕರಾರಿನಂತೆ ಎಲ್ಲಾ ಶಾಲೆಗಳಿಗೆ ಪೀಠೋಪಕರಣಗಳನ್ನು ಒದಗಿಸದೇ ಕೆಲವು ಶಾಲೆಗಳಿಗೆ ಮಾತ್ರ ಸರಬರಾಜು ಮಾಡಿರುತ್ತದೆ. ಈ ರೀತಿ ಕೆಲವು ಶಾಲೆಗಳಿಗೆ ಸರಬರಾಜು ಮಾಡಿರುವ ಪೀಠೋಪಕರಣಗಳ ಗುಣಮಟ್ಟದ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ. ಕರಾರಿನಂತೆ ಸದರಿ ಯೋಜನೆಯನ್ನು ನಿಗದಿತ ಅವಧಿಯೊಳಗೆ ಪೂರ್ಣ ಪ್ರಮಾಣದಲ್ಲಿ ಅನುಷ್ಠಾಗೊಳಿಸದೇ ಯೋಜನೆ ವಿಫಲವಾಗಿದೆ. ಆದ ಕಾರಣ ದಿನಾಂಕ 05.07.2016 ರಂದು ಇಲಾಖೆಯು ಯೋಜನೆಯನ್ನು ರದ್ದುಪಡಿಸಿ ಕಿಯೋನಿಕ್ಸ್ ಸಂಸ್ಥೆಯವರು ನೀಡಿದ್ದ ರೂ 22,43,15,270/- ಗಳ ಬ್ಯಾಂಕ್ ಗ್ಯಾರಂಟಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡಿದೆ ಹಾಗೂ ಸದರಿ ಸಂಸ್ಥೆಯ ಹಿಂದಿನ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ವಂಚನೆ, ನಂಬಿಕೆ ದ್ರೋಹ ಹಾಗೂ ಸರ್ಕಾರದ ಹಣ ದುರ್ಬಳಕೆ ಮಾಡಿದ ಬಗ್ಗೆ ಆರಕ್ಷಕ ಠಾಣೆಗೆ ದೂರು ಸಲ್ಲಿಸಲಾಗಿದ್ದು, ಸದರಿ ದೂರಿನನ್ವಯ FIR ದಾಖಲಾಗಿರುತ್ತದೆ. ದಿನಾಂಕ 20.11.2023 ರ ಸರ್ಕಾರದ ಆದೇಶದನ್ವಯ ಪ್ರಕರಣದ ತನಿಖೆಯನ್ನು CID ಸಂಸ್ಥೆಗೆ ವಹಿಸಲಾಗಿದೆ. ವಿಚಾರಣೆ ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಇಪಿ 49 ಇಜಿಓವಿ 2024**

**(ಎಸ್.ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು